<u>ಸಾಕ್ಷಿಯನ್ನು ದಿಃ**31.01.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎಸ್ ಎ ಆರ್ ವಕೀಲರಿಂದಃ</u>**

ಈಗಾಗಲೇ ದಾಖಲೆಗಳನ್ನು ಹೊರತು ಪಡಿಸಿ ನನ್ನ ಬಳಿ ದಾಖಲೆಗಳು ಇರುತ್ತವೆ. ಸಾಕ್ಷಿಯು ಪುನಃ ಈಗಾಗಲೇ ಆ ದಾಖಲೆಗಳನ್ನು ಸಹ ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಿಃ21.03.2005 ರಂದು ದಾವಾ ಸ್ವತ್ತು ನಾನು ಖರೀದಿ ಮಾಡಿರುವ ಬಗ್ಗೆ ಕ್ರಯ ಪತ್ರ ಹಾಜರು ಮಾಡಿದ್ದೇನೆ . ಸಾಕ್ಷಿ ದಾಖಲೆಗಳನ್ನು ನೋಡಿ ನಾನು ವಕೀಲರಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿ ಇನ್ನೊಮ್ಮೆ ಒಂದು ಎಕರೆ ಜಮೀನಿನ ಕ್ರಯ ಪತ್ರ ಮನೆಯಲ್ಲಿ ಇದೆ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರ ನನ್ನ ದೊಡ್ಡಪ್ಪ ಈರಭೋವಿ ಬರೆದುಕೊಟ್ಟಿದ್ದಾನೆ. ಸದರಿ ಜಮೀನು ಬೇರೆ ಯಾರಿಂದಲೋ ಖರೀದಿಸಿದ್ದ ನಂತರ ನನಗೆ ಮಾರಿದ್ದಾನೆ. ಈರಾಭೋವಿ ಯಿಂದ ಆ 1 ಎಕರೆ ಜಮೀನಿನ ದಾಖಲೆಗಳನ್ನು ಪಡೆದುಕೊಂಡಿದ್ದೇನೆ. ಆ ಮೂಲ ದಾಖಲೆಗಳು ಸಹ ಮನೆಯಲ್ಲಿ ಇರುತ್ತವೆ ಹಾಜರು ಪಡಿಸಲು ತೊಂದರೆ ಇಲ್ಲ.

ಪಾಲು ವಿಭಾಗ ಪತ್ರ ನಿಡಿ-1 ರಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿ 1 ಎಕರೆ ಬಿಟ್ಟು ಉಳಿದ ಎಲ್ಲಾ ಆಸ್ತಿಗಳನ್ನು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಾಯಿ ತಿಮ್ಮಕ್ಕ ಮೃತ ಪಟ್ಟು ಅಂದಾಜು 12 ವರ್ಷಗಳು ಆಗಿರುತ್ತವೆ. ನನ್ನ ತಮ್ಮ ಕೆಂಚಪ್ಪ ಎಷ್ಟನೇ ತರಗತಿವರೆಗೆ ಓದಿದ್ದಾನೆ ಎಂದು ನನಗೆ ಗೊತ್ತಿಲ್ಲ. ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಅಲ್ಪಸ್ವಲ್ಪ ಓದಲು ಬರುತ್ತದೆ.ಆದರೆ ಬರೆಯಲು ಬರುವುದಿಲ್ಲ. ಪಾಲುವಿಭಾಗದಲ್ಲಿ ಈ ದಾವೆಯ ಬಿ ಷಡ್ಯೂಲ್ 3 ಮತ್ತು 4 ನೇ ಐಟಂ ಆಸ್ತಿಗಳನ್ನು ಸೇರಿಸಿಲ್ಲ. ಸಾಕ್ಷಿ ಮುಂದುವರೆದು ತಾನು ತಮ್ಮ ತಲಾ 1 ಎಕರೆ ವಿಭಾಗ ಮಾಡಿಕೊಂಡಿದ್ದೇವೆ ಎಂದು

ಹೇಳುತ್ತಾರೆ. ದಾವೆಯ ಎ ಷಡ್ಯೂಲ್ ನ 1 ನೇ ಐಟಂ ಆಸ್ತಿ 1 ಎಕರೆ 17 ಗುಂಟೆ ನನ್ನ ಸ್ವಾದೀನದಲ್ಲಿ ಇದೆ ಆದರೆ ಸದರಿ ಜಮೀನು ನನ್ನ ತಾಯಿ ಪಾಲಿಗೆ ಹೋಗಿದೆ. ಸದರಿ 1 ಎಕರೆ 17 ಗುಂಟೆಯಲ್ಲಿ ನನಗೆ ಮತ್ತು ನನ್ನ ತಮ್ಮನಿಗೆ ತಲಾ ½ ಪಾಲು ಇದ್ದು ಹಂಚಿಕೊಳ್ಳಲು ತಯಾರಿದ್ದೇನೆ. ದಾವೆಯ ಬಿ ಷಡ್ಯೂಲ್ ಆಸ್ತಿಯಲ್ಲಿ ನನ್ನ ತಮ್ಮನಿಗೂ ಹಕ್ಕು ಇದೆ. ನನ್ನ ತಮ್ಮ ಕೆಂಚಪ್ಪನ ವಾರಸುದಾರರು ಎಂದರೆ ಆತನ ಹೆಂಡತಿ ಮತ್ತು ಮಕ್ಕಳು ಅಂದರೆ ವಾದಿಯರು ಎಂದರೆ ಸರಿ. ದಾವೆಯ ಸಿ ಷಡ್ಯೂಲ್ ಆಸ್ತಿಯು ನನ್ನ ದೊಡ್ಡಪ್ಪ ಈರಾಭೋವಿ ಮನೆಯ ಯಜಮಾನಿಕೆ ಮಾಡುತ್ತಿರುವಾಗ ತನ್ನ ಹೆಸರಿಗೆ ಕೊಂಡು ಕೊಂಡಿದ್ದಾನೆ ಎಂದರೆ ಸುಳ್ಳು . ಸಾಕ್ಷಿ ಆತನನಿಂದ ತಾನು ಕ್ರಯಕ್ಕೆ ಪಡೆದಿದ್ದೇನೆ ಎಂದು ಹೇಳುತ್ತಾರೆ.

**ಪ್ರಶ್ನೆಃ** ನಮ್ಮ ಕುಟುಂಬಕ್ಕೆ 1 ಎಕರೆ 17 ಗುಂಟೆ ಮತ್ತು 1 ಎಕರೆ 10 ಗುಂಟೆ ಹಾಗೂ 4 ಎಕರೆ 10 ಗುಂಟೆ ಹಾಗೂ ನೀವು ಕೊಂಡುಕೊಂಡೆ ಎಂದು ಹೇಳುವ 1 ಎಕರೆ ಜಮೀನುಗಳ ಪೈಕಿ ಯಾವುದು ನಿಮ್ಮ ಕುಟುಂಬಕ್ಕೆ ಮೊದಲು ಬಂತು?

**ಉತ್ತರಃ** 4 ಎಕರೆ 10 ಗುಂಟೆ ನಮ್ಮ ಕುಟುಂಬಕ್ಕೆ ಮೊದಲು ಬಂತು. ನಂತರ 1 ಎಕರೆ 17 ಗುಂಟೆ , ತದನಂತರ 1 ಎಕರೆ 10 ಗುಂಟೆ ಕೊನೆದಾಗಿ ನಾನು 1 ಎಕರೆ ಕ್ರಯಕ್ಕೆ ಪಡೆದಿದ್ದೇನೆ

ನನ್ನ ದೊಡ್ಡಪ್ಪ ಈರಾಭೋವಿ ಮನೆ ಯಜಮಾನಿಕೆ ಮಾಡುವಾಗ 1 ಎಕರೆ ಜಮೀನನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದಾನೆ ಎಂದರೆ ಸುಳ್ಳು. ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಪುಟ್ಟಾಭೋವಿ ಮೃತ ಪಟ್ಟ ನಂತರ ನಾನು ಕುಟುಂಬ ಕರ್ತನಾಗಿ ಸದರಿ 1 ಎಕರೆ ಜಮೀನು ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.